## ಡ್ರಾಪ್‌ಬಾಕ್ಸ್

ಈ ಆ್ಯಪ್‌ನಿಂದ ಐಫೋನ್ ಅಥವಾ ಐಪ್ಯಾಡ್ ಮೂಲಕ ದಾಖಲೆಗಳನ್ನು ಸ್ಕ್ಯಾನ್ ಮಾಡಬಹುದು. ಮೊದಲು ಸ್ಕ್ಯಾನರ್ ಪ್ರೋ ಮೂಲಕ ಸ್ಕ್ಯಾನ್ ಮಾಡಿ ನಂತರ ಶೇರ್ ಮಾಡಲು ಅಥವಾ ಕಂಪ್ಯೂಟರ್‌ಗೆ ವರ್ಗಾಯಿಸಲು ಡ್ರಾಪ್‌ಬಾಕ್ಸ್ ಆ್ಯಪ್ ಬಳಸಬೇಕಿತ್ತು. ಈಗ ಡ್ರಾಪ್‌ಬಾಕ್ಸ್ ಮೂಲಕವೇ ಸ್ಕ್ಯಾನಿಂಗ್ ಪ್ರಕ್ರಿಯೆ ಮುಗಿಸಬಹುದು. + ಬಟನ್ ಅನ್ನು ಕುಟ್ಟಿದ ನಂತರ ಸ್ಕ್ಯಾನ್ ಡಾಕ್ಯುಮೆಂಟ್ ಬಟನ್ ಕುಟ್ಟಿದರಾಯಿತು. ಸ್ಕ್ಯಾನ್ ಮಾಡಿದ ನಂತರ ಎಡಿಟ್ ಸ್ಕ್ರೀನ್‌ಗೆ ಹೀಗಿ ಹೆಚ್ಚುವರಿ ಪುಟಗಳನ್ನು ಸ್ಕ್ಯಾನ್ ಮಾಡಬಹುದು. ಜೊತೆಗೆ ಕಾಂಟ್ರಾಸ್ಟ್, ರೊಟೇಟ್ ಮೊದಲಾದ ಆಯ್ಕೆಗಳನ್ನು ಬಳಸಬಹುದು.




## ವಿಆರ್ ಆ್ಯಪ್

ನಿಮ್ಮ ಐಫೋನ್‌ನಿಂದ ವರ್ಚುವಲ್ ರಿಯಾಲಿಟಿ ಮಾಡಬಯಸುವಿರಾದರೆ ಕಡಿಮೆ ಬೆಲೆಯ ಹೆಡ್‌ಸೆಟ್ ಹಾಗೂ ಕೆಲವು ಆ್ಯಪ್‌ಗಳಿದ್ದರೆ ಸಾಕು. ಐಫೋನ್ ಜೊತೆ ಗೂಗ್ಲ್ ಕಾರ್ಡ್‌ಬೋರ್ಡ್ ಹೆಡ್‌ಸೆಟ್ ಹೊಂದಿಕೊಳ್ಳುತ್ತದೆ. ಗೂಗ್ಲ್ ಸ್ಟ್ರೀಟ್ ವ್ಯೂ ಆ್ಯಪ್ ಮೂಲಕ ಶಿಕಾಗೊ, ಸ್ಟೋನ್‌ಹೆಂಜ್ ಸೇರಿದಂತೆ ಎಲ್ಲಾ ಕಡೆ ಪ್ರವಾಸ ಮಾಡಿ ನೋಡಬಹುದು. ಇದು ಗೂಗ್ಲ್ ಮ್ಯಾಪ್‌ನ ಮೊಬೈಲ್ ಆವೃತ್ತಿಯಾಗಿದ್ದು, ಇದನ್ನು ಬಳಸಿ ನಿಮ್ಮದೇ ಆದ ಫೋಟೊ ಸ್ಫೀಯರ್ ಕೂಡಾ ಸೃಷ್ಟಿಸಿ ಫೊಟೊ ಸಂಗ್ರಹ ಮಾಡಬಹುದು.




## ಸ್ವೋರ್ಕಿಟ್




ಆರೋಗ್ಯ, ಫಿಟ್ನೆಸ್ ಬಗ್ಗೆ ಕಾಳಜಿ ಇರುವವರಿಗೆ ಇದು ಅತ್ಯುತ್ತಮ ಐಫೋನ್ ಆ್ಯಪ್. ಯಾವುದೇ ಸಲಕರಣೆಗಳಿಲ್ಲದೇ ಎಲ್ಲಿ ಬೇಕಾದರೂ ವ್ಯಾಯಾಮ ಮಾಡುವಂತಹ ಹಲವು ಆಯ್ಕೆಗಳು ಇದರಲ್ಲಿವೆ. ವ್ಯಾಯಾಮದ ಪ್ರತಿಯೊಂದು ಚಲನೆಯನ್ನೂ ವಿಡಿಯೋ ಹಾಗೂ ಆಡಿಯೋ ತರಬೇತಿ ನಿರ್ದೇಶನ ನೀಡುತ್ತದೆ. ನಿಮಗೆ ಅನುಕೂಲಗಳಿರುವ ನಿಮ್ಮದೇ ವ್ಯಾಯಾಮವನ್ನು ಕೂಡಾ ವಿನ್ಯಾಸ ಮಾಡಿಕೊಳ್ಳಬಹುದು. ಉಚಿತವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಉಚಿತ ಆವೃತ್ತಿಯಲ್ಲಿ ಸ್ಟ್ರೆಂತ್, ಸ್ಟ್ರೆಚಿಂಗ್, ಕಾರ್ಡಿಯೊ, ಪೈಲೇಟ್ಸ್ ಮತ್ತು ಯೋಗ ವಿಭಾಗಗಳಿವೆ. ಇವುಗಳಿಗೆ ಯಾವುದೇ ಸಲಕರಣೆಗಳ ಅಗತ್ಯವಿಲ್ಲ. ಇವುಗಳಲ್ಲಿ ಸುಧಾರೀಕೃತ ಆವೃತ್ತಿ ಬೇಕಾದರೆ ಶುಲ್ಕ ನೀಡಬೇಕು.

## ಮೊಮೆಂಟ್ಸ್

ಫೇಸ್‌ಬುಕ್ ಬಳಕೆದಾರರು ಫೋಟೋಗಳನ್ನು ಸಿಂಕ್ ಮಾಡಿದರೆ ಈ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ನಿಮ್ಮ ಸಾಮಾಜಿಕ ಜಾಲತಾಣದಲ್ಲಿ ಸಿಂಕ್ ಆದ ಎಲ್ಲಾ ಫೋಟೋಗಳು ಅಳಿಸಿ ಹೋಗುತ್ತವೆ ಎಂದು ಫೇಸ್‌ಬುಕ್ ಸಂದೇಶವೊಂದರಲ್ಲಿ ಎಚ್ಚರಿಕೆ ನೀಡಿದೆ. ಜುಲೈ 7ರೊಳಗೆ ಈ ಆ್ಯಪ್ ಅನ್ನು ಡೌನ್‌ಲೋಡ್ ಮಾಡಿ ಅಳವಡಿಸಿಕೊಳ್ಳಬೇಕು. ಇಲ್ಲದಿದ್ದರೆ ತೆಗೆದು ಹಾಕಲಾಗುವುದು ಎಂದು ಸಂದೇಶದಲ್ಲಿ ಹೇಳಲಾಗಿದೆ. ಸಾಮಾಜಿಕ ಜಾಲತಾಣದಲ್ಲಿ ಫೋಟೋಗಳನ್ನು ಹಾಕದೆ ಸ್ನೇಹಿತರ ಜೊತೆ ಹಂಚಿಕೊಂಡ ಫೋಟೋಗಳು, ಆಲ್ಬಂಗಳು ಈ ವಿಭಾಗದಲ್ಲಿ ಬರುತ್ತವೆ. ಹಿಂದೆ ಇದ್ದ ಫೋಟೊ ಸಿಂಕ್ ಆ್ಯಪ್‌ನಿಂದ ಸ್ಮಾರ್ಟ್‌ಫೋನ್‌ನಿಂದ ಈ ಫೋಟೋಗಳು ಅಪ್‌ಲೋಡ್ ಆಗುತ್ತಿದ್ದವು. ಇನ್ನು ಮುಂದೆ ಮೊಮೆಂಟ್ಸ್ ಆ್ಯಪ್‌ನಿಂದ ಫೋಟೋಗಳನ್ನು ಅಪ್‌ಲೋಡ್ ಮಾಡಿಕೊಳ್ಳಬಹುದು.



Moments

■ ಎಸ್. ತುಂಬೆ